# “ಈ ಸಂಕಷ್ಟದ ಸಮಯಗಳಲ್ಲಿ ದೇವರಲ್ಲಿ ಭರವಸವಿಡುವುದು”

ಕೊರೊನಾ ಸೋಂಕಿನ ಪರಿಣಾಮಗಳ ಕುರಿತು ಮುಖ್ಯ ಅಪೊಸ್ತಲರಾದ ಜಾನ್ ಲುಕ್ ಶ್ನೈಡರ್‌ರವರೊಂದಿಗೆ ಒಂದು ಸಮಾಗಮ

*ಜ್ಯೂರಿಚ್. ಈ ಹಲವು ದಿನಗಳಿಂದ ಪ್ರತಿಯೊಬ್ಬರ ಆಲೋಚನೆಗಳಲ್ಲಿರುವ ವಿಷಯವು ಕೊರೊನಾ ಸೋಂಕು ಆಗಿದೆ. ಪ್ರತಿದಿನವೂ, ವರದಿಗಳು ನಮಗೆ ಇನ್ನೂ ಹೆಚ್ಚಿನ ಕೆಟ್ಟ ಸುದ್ದಿಗಳನ್ನು ತಿಳಿಸುತ್ತಿವೆ. ಈ ಕುರಿತು ನ್ಯೂ ಅಪೊಸ್ಟೊಲಿಕ್ ಚರ್ಚಿನ ಮುಖ್ಯ ಅಪೊಸ್ತಲರು ಏನು ಹೇಳುತ್ತಿರುವರು? ದೇವರಲ್ಲಿ ಭರವಸವಿಡಬೇಕೆಂದು ಅವರು ತಮ್ಮ ಸಹೋದರ ಸಹೋದರಿಯರಲ್ಲಿ ಕೇಳಿಕೊಳ್ಳುತ್ತಿರುವರು.*

**ಮುಖ್ಯ ಅಪೊಸ್ತಲರಾದ ಶ್ನೈಡರ್‌ರವರೇ, ಈ ಕೊರೊನಾ ಬಿಕ್ಕಟ್ಟು, ಪ್ರಪಂಚದಾದ್ಯಂತದ ಜನರು ತಮ್ಮ ಉಸಿರನ್ನು ಹಿಡಿದಿಡಲು ಕಾರಣವಾಗಿದೆ. ಇಲ್ಲಿಯವರೆಗೆ ಎಲ್ಲಾ ಖಂಡಗಳಲ್ಲಿ ಅನೇಕ ಜನರು ಈ ಸೋಂಕಿಗೆ ಒಳಗಾಗಿದ್ದಾರೆ ಅಥವಾ ಸತ್ತೂ ಹೋಗಿದ್ದಾರೆ. ಅವರಿಗಾಗಿ ನೀವು ಹೇಳಬೇಕಾದ ಸಾಂತ್ವನದ ಸಂದೇಶವಿದೆಯೋ?**

ನಾನು ಈ ಬಿಕ್ಕಟ್ಟನ್ನು ಬಹು ಗಂಭೀರವಾಗಿ ತೆಗೆದುಕೊಳ್ಳುತ್ತೇನೆ. ಜಾಗತಿಕ ಅಂದಾಜಿನ ಪ್ರಕಾರ, ಈ ಕೊರೊನಾ ವೈರಸ್‌ನಿಂದ ಸುಮಾರು 11,400 ಜನರು ಈಗಾಗಲೇ ಸತ್ತಿದ್ದಾರೆ, ಮತ್ತು ಸುಮಾರು 2,75,000 ಜನರು ಸಧ್ಯಕ್ಕೆ ಬಾಧಿತರಾಗಿದ್ದಾರೆ (21 ಮಾರ್ಚ್ ವರೆಗಿನ ವರದಿಯ ಪ್ರಕಾರ; ಇತ್ತೀಚಿನ ಸಂಖ್ಯೆಗಳಿಗಾಗಿ: https://coronavirus.jhu.edu/map.html ನೋಡಿರಿ). ದುರ್ದೈವದಿಂದ ಇನ್ನು ಅನೇಕರು ಇದಕ್ಕೆ ಬಲಿಯಾಗುವರು. ಈ ಬಿಕ್ಕಟ್ಟಿಗೆ ಸಿಲುಕಿಕೊಂಡವರ ಸಂಕಷ್ಟದಲ್ಲಿ ನಾವು ಪಾಲುಗಾರರಾಗುತ್ತೇವೆ ಮತ್ತು ಅವರಿಗಾಗಿ ಪ್ರಾರ್ಥಿಸುತ್ತೇವೆ! ಜನರಿಗೆ ಸಹಾಯಮಾಡಲು ಮುಂಚೂಣಿಯಲ್ಲಿರುವ ಎಲ್ಲಾ ಬದ್ಧ ವ್ಯಕ್ತಿಗಳಿಗೆ ನಾವು ವಂದಿಸುತ್ತೇವೆ. ಇಂತಹ ಸಂದರ್ಭಗಳಲ್ಲಿ ಇತರರಿಗೆ ಸಹಾಯಮಾಡಲು ಎಷ್ಟು ಜನರು ಸಿದ್ಧರಾಗಿದ್ದಾರೆಂಬುದನ್ನು ನೋಡಲು ನಿಜವಾಗಿಯೂ ಸುಂದರವಾಗಿರುತ್ತದೆ.

ಇಂತಹ ಸಮಯಗಳಲ್ಲಿಯೇ, ನಿರ್ದಿಷ್ಟವಾಗಿ ಈಗಾಗಲೇ ಹಿಂದೆ ದೊಡ್ಡ ಸಂಕಟಗಳನ್ನು ಅನುಭವಿಸಿರುವ ನಮ್ಮ ಸದಸ್ಯರಿಂದ ನಾವು ಕಲಿಯಬಹುದು:

- ನನ್ನ ಮೂಲ ಯೋಜನೆಯ ಪ್ರಕಾರ, ಮುಂದಿನ ವಾರ ನಾನು ಇಂದೋನೇಷಿಯಾದಲ್ಲಿ ಇರಬೇಕಾಗಿತ್ತು. ಆ ದೇಶದಲ್ಲಿ, ಎರಡು ಭೂಕಂಪಗಳ ಕಾರಣದಿಂದ 2,500ಕ್ಕಿಂತಲೂ ಹೆಚ್ಚಿನ ಜನರು ತಮ್ಮ ಪ್ರಾಣ ಕಳೆದುಕೊಂಡಿದ್ದಾರೆ. ಈ ದ್ವೀಪಗಳ ನಿವಾಸಿಗಳು ಈ ಅಗೋಚರವಾದ ಅಪಾಯಗಳಿಂದ ತಮ್ಮನ್ನು ಕಾಪಾಡಿಕೊಳ್ಳುವ ಯಾವ ಮಾರ್ಗವೂ ಹೊಂದಿರಲಿಲ್ಲ.
- ನಾನು ಕೆಲವೊಮ್ಮೆ ಸ್ವಲ್ಪ ಅಸಮಾಧಾನ ವ್ಯಕ್ತಪಡಿಸುತ್ತೇನೆ ಏಕೆಂದರೆ ಫ್ರಾನ್ಸ್‌ನಲ್ಲಿ ಕರ್ಫ್ಯೂವಿನ ಪರಿಣಾಮದಿಂದ ನಾನು ಮನೆಯಲ್ಲೇ ಇರಬೇಕಾಗುತ್ತದೆ. ಆಫ್ರಿಕಾದಲ್ಲಿ ಸಾವಿರಾರು ಜನರು – ಅವರಲ್ಲಿ ಅನೇಕರು ನಮ್ಮ ಸದಸ್ಯರು – ಹೆಚ್ಚುಕಡಿಮೆ ಬಂಧನದಲ್ಲಿಡಲಾಗುವಂಥ ನಿರಾಶ್ರಿತರ ಶಿಬಿರಗಳಲ್ಲಿ (ರೆಫ್ಯೂಜಿ ಕ್ಯಾಂಪ್‌ಗಳಲ್ಲಿ) ವಾಸಿಸುತ್ತಿರುವರು.
- ದುರ್ದೈವದಿಂದ ಈ ಕೊರೊನಾ ಬಿಕ್ಕಟ್ಟು ಅನೇಕ ಸ್ಥಳಗಳಲ್ಲಿ ಭಯಂಕರ ಆರ್ಥಿಕ ಪರಿಣಾಮಗಳನ್ನು ಸಹ ಬೀರುವುದು. ಮತ್ತು ಇದು – ಎಂದಿನಂತೆಯೇ – ಮೊಟ್ಟಮೊದಲನೆಯದಾಗಿ ಏನೂ ಇಲ್ಲದವರ ಮೇಲೆ ಮೊದಲು ಪರಿಣಾಮ ಬೀರುತ್ತದೆ. ಈ ಸಂಗತಿಯು ನನಗೆ ತೀವ್ರವಾಗಿ ಕಾಡುತ್ತದೆ! ಇಲ್ಲಿ ನಾನು, 2017ರಲ್ಲಿ ಒಂದು ವಾರದ ಅವಧಿಯಲ್ಲೇ ತಮ್ಮಲ್ಲಿರುವುದೆಲ್ಲವನ್ನೂ ಕಳೆದುಕೊಂಡಂಥ ಮತ್ತು ಮತ್ತೊಂದು ದೇಶಕ್ಕೆ ಅಥವ ಕಾಡಿಗೆ ಓಡಿಹೋದಂಥ ಕಾಸಾಯಿ ಪ್ರಾಂತದ 75,000 ಸದಸ್ಯರನ್ನು ಜ್ಞಾಪಿಸಿಕೊಳ್ಳುತ್ತೇನೆ.
- ಹೌದು, ನಾವು ಇನ್ನು ಮುಂದೆ ಡಿವೈನ್ ಸರ್ವಿಸ್‌ಗಳಿಗಾಗಿ ಒಂದುಗೂಡಲಾರೆವೆಂಬುದು ನಿಜ. ಅದು ನೋವುಂಟುಮಾಡುತ್ತದೆ. ಆದಾಗ್ಯೂ, ಹಲವು ವಾರಗಳ ಹಿಂದೆಯೇ ದಕ್ಷಿಣ ಆಫ್ರಿಕಾದಲ್ಲಿದ್ದ ಒಂದು ಸಂಗತಿಯನ್ನು ನಾನು ಜ್ಞಾನಪಿಸಿಕೊಳ್ಳುತ್ತೇನೆ. ಅಲ್ಲಿರುವ ಕ್ರೈಸ್ತರಾದರೋ ಡಿವೈನ್ ಸರ್ವಿಸಿಗೆ ಹಾಜರಾಗುತ್ತಿರುವರೆಂಬ ಕಾರಣದಿಂದಲೇ ಕೊಲ್ಲಲ್ಪಡುತ್ತಿರುವರು.
- ನಾನು, ರಷ್ಯಾ ಅಥವ ಪೆಸಿಫಿಕಿನ ದೂರದ ದ್ವೀಪಗಳಲ್ಲಿರುವ – ಹಲವು ವಾರಗಳಲ್ಲೊಮ್ಮೆ ಅಥವಾ ಹಲವು ತಿಂಗಳಲ್ಲೊಮ್ಮೆ ಪವಿತ್ರಭೋಜನದೊಂದಿಗಿರುವ ಡಿವೈನ್ ಸರ್ವಿಸ್‌ಗಳನ್ನು ಅನುಭವಿಸುವ ಅವಕಾಶ ಹೊಂದಿರುವ ನಮ್ಮ ಸಹೋದರರನ್ನು ಜ್ಞಾಪಿಸಿಕೊಳ್ಳುತ್ತೇನೆ.

© New Apostolic Church International

ನಾನು ಈ ಸಂಗತಿಗಳನ್ನು ಕೊರೊನಾದ ಈ ಸಂಕಟಕಾಲವನ್ನು ಹೀನೈಸುವದಕ್ಕೆ ಹೇಳುತ್ತಿಲ್ಲ. ಆದರೆ ಅದಕ್ಕೆ ವಿಪರೀತವಾಗಿ: ಇಂಥಹ ದೇಶಗಳಲ್ಲಿ, ಈ ಪರಿಸ್ಥಿತಿಗಳಲ್ಲಿ ಜೀವಿಸುವ ನಮ್ಮ ಸಹೋದರ ಸಹೋದರಿಯರಿಂದ ಕಲಿತುಕೊಳ್ಳಲು ನಿಮಗೆ ಕರೆನೀಡುತ್ತಿರುವೆನು. ಇಂಥಹ ಎಲ್ಲಾ ಆಕ್ಷೇಪಣೆಗಳಿದ್ದಾಗ್ಯೂ ಇವರು ಇಷ್ಟು ದೃಢವಾಗಿ ಉಳಿದುಕೊಳ್ಳಲು ಹೇಗೆ ಸಾಧ್ಯವಾಯಿತು? ಇವರು ಕ್ರಿಸ್ತನಲ್ಲಿ ಆಳವಾಗಿ ಬೇರೂರಿರುವ ಕಾರಣದಿಂದಲೇ ಸಾಧ್ಯವಾಯಿತು. ಕರ್ತನಿಗಾಗಿರುವ ಅವರ ಪ್ರೀತಿಯೇ – ಅವರ ರಹಸ್ಯವಾಗಿದೆ! ಇಂದು ನಾವು ಅನುಭವಿಸುತ್ತಿರುವ ಈ ಕಷ್ಟದ ಸಂದರ್ಭಗಳಲ್ಲಿ, ಹಲವು ವಾರಗಳ ಹಿಂದೆ ನಮ್ಮ ಆಲೋಚನೆಗಳಲ್ಲಿರುವ ಅಥವಾ ನಮಗೆ ಭಾರವಾಗಿರುವ ವಿವಿಧ ಸಂಗತಿಗಳು ಆಕಸ್ಮಿಕವಾಗಿ ಇಂದಿನ ದಿನದಲ್ಲಿ ಸಂಪೂರ್ಣವಾಗಿ ತಮ್ಮ ಪ್ರಾಮುಖ್ಯತೆಯನ್ನು ಕಳೆದುಕೊಂಡಿವೆ. ಈಗ ಕ್ರಿಸ್ತನೊಂದಿಗೆ ನಮ್ಮ ಸಂಬಂಧವನ್ನು ಕಾಪಾಡಿಕೊಳ್ಳುವುದೊಂದೇ ನಮ್ಮ ಆಲೋಚನೆಗಳಲ್ಲಿ ಅತಿ ಪ್ರಾಮುಖ್ಯವಾದ ಸಂಗತಿಯಾಗಿರುವುದು!

ದೇವರಿಗಾಗಿರುವ ನಮ್ಮ ಪ್ರೀತಿಯಲ್ಲಿ ನಾವು ದೃಢವಾಗಿ ಉಳಿದುಕೊಳ್ಳೋಣ. ತನ್ನನ್ನು ಪ್ರೀತಿಸುವವರಿಗೆ ಸಹಾಯಮಾಡಲು ಕರ್ತನು ಯಾವಾಗಲೂ ಒಂದು ವಿಶೇಷವಾದ ಮಾರ್ಗವನ್ನು ಹುಡುಕುವನು. ದೇವರ ವಾಗ್ದಾನವು ಈಗಲೂ ಇರುವುದು: ದೇವರು ... ತನ್ನನ್ನು ಪ್ರೀತಿಸುವವರ ಹಿತಕ್ಕಾಗಿ ಎಲ್ಲಾ ಕಾರ್ಯಗಳು – ಈ ಕೊರೊನಾ ವೈರಸ್ ಸಹ – ಅನುಕೂಲವಾಗುತ್ತದೆ (ರೋಮಾ 8: 28 ನೋಡಿರಿ).

**ಸಧ್ಯಕ್ಕೆ ನೀವು ಸ್ವತಃ ಪ್ರಯಾಣಿಸುವಂತಿಲ್ಲ. ಈ ಮುಂದಿನ ಎರಡು ವಾರಗಳನ್ನು ನೀವು ಹೇಗೆ ನೋಡುತ್ತೀರಿ?**

ಅಧಿಕಾರಿಗಳು ವಿಧಿಸಿರುವ ಮಿತಿಗಳ ಕಾರಣದಿಂದ, ಏಪ್ರಿಲ್ 10ರ ವರೆಗೆ ಯೋಜಿಸಿರುವ ನನ್ನ ಎಲ್ಲಾ ಪ್ರವಾಸಗಳನ್ನು ನಾನು ರದ್ದುಗೊಳಿಸಬೇಕಾಯಿತು. ಸಧ್ಯಕ್ಕೆ, ನಂತರದ ಪರಿಸ್ಥಿತಿಗಳು ಹೇಗಿರುವವೆಂಬುದು ಯಾರಿಗೂ ಗೊತ್ತಿಲ್ಲ. ಆದ್ದರಿಂದ ಎಲ್ಲರಂತೆ ನಾನು ಸಹ ಈಗಿರುವ ಪರಿಸ್ಥಿತಿಯೊಂದಿಗೆ ಹೊಂದಿಕೊಳ್ಳಬೇಕು – ಆದರೆ ನಾನು ಧೈರ್ಯ ಅಥವಾ ನಿರೀಕ್ಷೆಯನ್ನು ಕಳಕೊಂಡಿಲ್ಲ: ದೇವರು ನಮ್ಮೊಂದಿಗಿದ್ದಾನೆ ಮತ್ತು ಆತನು ತನ್ನ ಮಕ್ಕಳನ್ನು ವಿಶೇಷವಾಗಿ ಕಠಿಣ ಪರಿಸ್ಥಿತಿಗಳಲ್ಲಿ ಅನಾಥರಾಗಿ ಬಿಡುವುದಿಲ್ಲವೆಂಬುದನ್ನು ನಾನು ಬಲ್ಲೆನು. ಧೈರ್ಯವನ್ನು ಮಾತ್ರ ಕಾಪಾಡಿಕೊಳ್ಳಿರಿ: ಎಲ್ಲವೂ ಸರಿಹೋಗುವುದು.

**ಸಭೆಯ ಜೀವಿತವು ಸಂಪೂರ್ಣವಾಗಿ ನಿಂತುಹೋಗಿದೆ. ಡಿವೈನ್ ಸರ್ವಿಸ್‌ಗಳು ಜರುಗುವ ಸಂಭಾವನೆ ತೀರ ಕಡಿಮೆಯಾಗಿದೆ. ನಮ್ಮ ಸಹೋದರ ಸಹೋದರಿಯರಿಗೆ ನೀವೇನು ಸಲಹೆ ನೀಡಲು ಬಯಸುವಿರಿ?**

ಮನೆಗಳಲ್ಲೇ ಉಳಿದುಕೊಳ್ಳಿರಿ ಮತ್ತು ಈ ಪರಿಸ್ಥಿತಿಯಿಂದ ಅತ್ಯುತ್ತಮವಾಗಿರುವುದನ್ನು ಪಡೆದುಕೊಳ್ಳಿರಿ. ಎಲ್ಲೆಲ್ಲಿ ಸಾಧ್ಯವೋ, ನಮ್ಮ ಜಿಲ್ಲಾ ಅಪೊಸ್ತಲರು ತಮ್ಮ ಸದಸ್ಯರಿಗೋಸ್ಕರ ಟ್ರಾನ್ಸಮಿಷನಿನ ಮೂಲಕ ಡಿವೈನ್ ಸರ್ವಿಸ್‌ಗಳು ಲಭ್ಯವಾಗುವಂತೆ ವ್ಯವಸ್ಥೆಮಾಡಿದ್ದಾರೆ. ದೇವರು ಏಕೆ ಇಂಥಾ ಪರಿಸ್ಥಿತಿಯು ಬರಲು ಅನುಮತಿಸಿದನೆಂಬುದು ನಮಗೆ ಗೊತ್ತಿಲ್ಲ. ಆದರೆ ಆತ್ಮಿಕ ಅಭಾವದ ಈ ಸಮಯವು ಡಿವೈನ್ ಸರ್ವಿಸ್‌ಗಳು, ಸೇವಕರು ಹಾಗು ಪವಿತ್ರಭೋಜನವು ನಮಗೆಷ್ಟು ಪ್ರಾಮುಖ್ಯವಾಗಿವೆ ಎಂಬ ಸಂಗತಿಯನ್ನು ಗುರುತಿಸಲು ಸಹಾಯಮಾಡುವುದೆಂದು ನಾನು ಖಚಿತನಾಗಿದ್ದೇನೆ.

**ಮತ್ತು ಟ್ರಾನ್ಸಮಿಷನಿನ ಈ ಕೇಂದ್ರೀಯ ಡಿವೈನ್ ಸರ್ವಿಸ್‌ಗಳಲ್ಲಿ ಪವಿತ್ರಭೋಜನಾಚರಣೆಯೇ ಇಲ್ಲ?**

ಅದು ಸರಿ. ಈ ಡಿವೈನ್ ಸರ್ವಿಸ್‌ಗಳು ಸಮಾನ್ಯ ಲಿಟರ್ಜಿಯ ಪ್ರಕಾರವೇ ಜರುಗಿಸಲ್ಪಡುತ್ತವೆ ಆದರೆ ಅವುಗಳಲ್ಲಿ ಪವಿತ್ರಭೋಜನದ ಆಚರಣೆ ಮಾತ್ರ ಇರುವುದಿಲ್ಲ. ಒಂದು ವೇಳೆ ನಮ್ಮ ಸದಸ್ಯರಲ್ಲಿ ಹಲವರು ಮಾತ್ರ ಪವಿತ್ರಭೋಜನವನ್ನು ಆಚರಿಸಿ, ಅದೇ ಸಮಯದಲ್ಲಿ ಮನೆಯಲ್ಲಿ ಕೂತುಕೊಂಡು ಡಿವೈನ್ ಸರ್ವಿಸ್‌ನಲ್ಲಿ ಪಾಲ್ಗೊಳ್ಳುವ ಅನೇಕರು ಆಚರಿಸದೆ ಇರುವುದು ಸರಿಯಾಗಿರುತ್ತಿರಲಿಲ್ಲ!

**ಮೃತಪಟ್ಟವರಿಗಾಗಿರುವ ಡಿವೈನ್ ಸರ್ವಿಸ್‌ಗಳಲ್ಲಿ ಇಬ್ಬರು ಪ್ರತಿನಿಧಿಗಳು ಹಂಬಲಿಸುವ ಜೀವಾತ್ಮಗಳ ಪರವಾಗಿ ಪವಿತ್ರಭೋಜನದ ರೊಟ್ಟಿಯನ್ನು ತೆಗೆದುಕೊಳ್ಳುವ ನಮ್ಮ ಆಚರಣೆಗೆ ಅನುಸಾರವಾಗಿ ಈ ಸಂಸ್ಕಾರವು ಆಚರಿಸಬಹುದಾಗಿತ್ತಲ್ಲವೋ?**

ಕಳೆದ ಹಲವು ದಿನಗಳಲ್ಲಿ ಅನೇಕ ಸಹೋದರ ಸಹೋದರಿಯರು ಈಗಾಗಲೇ ಇದನ್ನು ಪ್ರಸ್ತಾಪಿಸಿರುತ್ತಾರೆ: ವೀಕ್ಷಿಸುವ ಸದಸ್ಯರ ಪರವಾಗಿ ತೆಗೆದುಕೊಳ್ಳುವ ಇಬ್ಬರು ಸೇವಕರಿಗೆ ಕಾರ್ಯಕರ್ತನು ಪವಿತ್ರಭೋಜನವನ್ನು ಹಂಚಬಹುದೆಂದು. ಇದನ್ನು ಎಚ್ಚರಿಕೆಯಿಂದ ಪರಿಗಣಿಸಿದ ನಂತರ, ಮತ್ತು ಮೊಟ್ಟ ಮೊದಲು ಈ ಸೋಂಕಿನಿಂದ ಬಾಧಿತರಾಗಿರುವ ಯೂರೋಪಿನ ಜಿಲ್ಲಾ ಅಪೊಸ್ತಲರೊಂದಿಗೆ ಚರ್ಚಿಸಿದ ನಂತರ, ಹೇಗೂ – ಈ ಸಲಹೆಯನ್ನು ಅನುಸರಿಸಬಾರದೆಂದು ನಾನು ನಿರ್ಧರಿಸಿದ್ದೇನೆ.

**ಹಾಗೇಕೆ ಮಾಡಬಾರದು?**

ಪವಿತ್ರಭೋಜನವು, ನಮ್ಮ ಕ್ಯಾಟಕಿಸಮ್‌ನಲ್ಲಿ ವಿವರಿಸಲ್ಪಟ್ಟ, ರಕ್ಷಣೆಯ ಪರಿಣಾಮ ಬೀರುವ ಒಂದು ಸಂಸ್ಕಾರವಾಗಿದೆ (ಸಿಎನ್‌ಎಸಿ). ನಮ್ಮ ಸಧ್ಯದ ಅಗತ್ಯಗಳಿಗನುಸಾರವಾಗಿ ಇದರ ಆಚರಣೆಯ ವಿಧಾನವನ್ನು ಪ್ರಾಯೋಗಿಕವಾಗಿ ಹಾಗೆಯೇ ಬದಲಾಯಿಸಲಾರೆವು. ಪವಿತ್ರಭೋಜನದ ಪವಿತ್ರತೆಯನ್ನು ಕಾಪಾಡುವುದು ಅಪೊಸ್ತಲತ್ವ – ಅದರಲ್ಲೂ ವಿಶೇಷವಾಗಿ ಮುಖ್ಯ ಅಪೊಸ್ತಲರ ಜವಾಬ್ದಾರಿಯಾಗಿರುತ್ತದೆ! ಮೃತಪಟ್ಟವರಿಗಾಗಿ ಹಂಚಲ್ಪಡುವ ಪವಿತ್ರಭೋಜನದ ಕುರಿತು ನೋಡಿದರೆ, ಮೃತಪಟ್ಟವರಿಗೆ ರಕ್ಷಣೆಯ ಈ ಕಾರ್ಯಗಳು ಹಂಚಲ್ಪಡಬಹುದು ಮತ್ತು ಹಂಚಲೇಬೇಕು ಎಂಬ ಮನವರಿಕೆಯು ನಮಗಿದೆ. ಇದನ್ನು ಮಾಡುವ ಒಂದೇ ಒಂದು ಮಾರ್ಗವೆಂದರೆ ಮೃತಪಟ್ಟವರ ಲೋಕದಲ್ಲಿರುವ ಜೀವಾತ್ಮಗಳನ್ನು ಪ್ರತಿನಿಧಿಸಲು ಜೀವಿಸುವವರನ್ನು ಇದರಲ್ಲಿ ತೊಡಗಿಸುವುದು. ಒಬ್ಬ ಯಾಜಕೀಯ ಸೇವಾಸ್ಥಾನದ ಮೂಲಕ ಹಂಚಲ್ಪಡುವ ಪ್ರತಿಷ್ಠಿಸಲ್ಪಟ್ಟ ರೊಟ್ಟಿಯನ್ನು ಯೋಗ್ಯರೀತಿಯಿಂದ ಸ್ವೀಕರಿಸುವುದರ ಮೂಲಕ ನಾವು ಕ್ರಿಸ್ತನ ದೇಹವನ್ನು ತಿಂದು ಆತನ ರಕ್ತವನ್ನು ಕುಡಿಯಬೇಕು (ಸಂಕ್ಷಿ. ನ್ಯೂ ಅಪೊಸ್ಟಾಲಿಕ್ ವಿಶ್ವಾಸ ಪ್ರಮಾಣದ ಏಳನೆಯ ನಿಬಂಧನೆ).

**ಮತ್ತು ಪ್ರತಿಷ್ಠಿಸಿಲ್ಪಟ್ಟ ರೊಟ್ಟಿಗಳನ್ನು ಸಮಯಕ್ಕಿಂತ ಮುಂಚಿತವಾಗಿ ಲಭ್ಯವಾಗುವಂತೆ ಮಾಡಲು ಬೇರೆ ಮಾರ್ಗವೇ ಇಲ್ಲವೋ?**

ನಮ್ಮ ಚರ್ಚಿನಲ್ಲಿ ಅನೇಕ ವರುಷಗಳಿಂದ ನಾವು ಈ ಆಚರಣೆಯಿಂದ ಪರಿಚಿತರಾಗಿದ್ದೇವೆ: ವಿಶ್ವಾಸಿಗಳು, ಒಬ್ಬ ಸೇವಕನು ಉಪಸ್ಥಿತನಾಗಿರದಿದ್ದರೂ ಪವಿತ್ರಭೋಜನವನ್ನು ಅವರು ಸಹ ಆಚರಿಸಬಹುದೆಂದು ಮುಂಚಿತವಾಗಿ ಪ್ರತಿಷ್ಠಿಸಲ್ಪಟ್ಟ ರೊಟ್ಟಿಗಳನ್ನು ಹೊಂದುವರು. ಉದಾಹರಣೆಗಾಗಿ, ಸಭಾಪರಿಪಾಲನೆಯ ಪತ್ರಗಳನ್ನು ಹೊಂದುವವರಿಗೋಸ್ಕರ ಈ ವಿಧಾನವು ಬಳಸಲಾಗುತ್ತದೆ. ಹೇಗೂ, ಈ ಆಚರಣೆಯು ಸಹ ಒಂದು ವಿನಾಯಿತಿಯಾಗಿ ಉಳಿದುಕೊಳ್ಳಬೇಕು. ಇದು ಯಾವ ರೀತಿಯಿಂದಲೂ, ಸಂಪೂರ್ಣವಾಗಿ ಮಾನ್ಯ ರೀತಿಯಲ್ಲಿ, ವಿಶ್ವಾಸಿಗಳ ಅನ್ಯೋನ್ಯತೆಯಲ್ಲಿ ಆಚರಿಸಲ್ಪಡುವ ಪವಿತ್ರಭೋಜನದ ವಿಧಾನವನ್ನು ಬದಲಾಯಿಸಲಾಗುವುದಿಲ್ಲ. ಇದನ್ನು ಸ್ಪಷ್ಟಪಡಿಸಬೇಕು: ಒಬ್ಬ ವಿಶ್ವಾಸಿಯು ಮನೆಯಲ್ಲಿ ಪರದೆಯ ಮೇಲೆ ತನ್ನ ಪರವಾಗಿ ಪ್ರತಿಷ್ಠಿಸಲ್ಪಟ್ಟ ರೊಟ್ಟಿಯನ್ನು ತೆಗೆದುಕೊಳ್ಳುವುದನ್ನು ನೋಡುವಂಥ ಪವಿತ್ರಭೋಜನಾಚರಣೆಯು ನಿಜವಾದ ರೀತಿಯಲ್ಲಿ ಆಚರಿಸುವ ಪವಿತ್ರಭೋಜನದಂತಹ ಪರಿಣಾಮ ಹೊಂದಿರುವುದಿಲ್ಲ.

**ಹಾಗಾದರೆ ಸದಸ್ಯರಿಗೆ ನೀವೇನನ್ನು ಸೂಚಿಸಲು ಇಷ್ಟಪಡುವಿರಿ?**

ಈ ಸೋಂಕು ಅಂತ್ಯಗೊಳ್ಳುವ ತನಕ ಅನೇಕ ಸದಸ್ಯರು ಪವಿತ್ರಭೋಜನವಿಲ್ಲದೆ ಇರಬೇಕಾಗುತ್ತದೆಂಬ ಸಂಗತಿಯು ನಾನು ತಿಳಿದ್ದೇನೆ. ಅವರ ಕಷ್ಟದಲ್ಲಿ ನಾನು ಸಹ ಪಾಲುಗಾರನಾಗಿರುತ್ತೇನೆ, ಏಕೆಂದರೆ ಅವರಂತೆ ನಾನು ಸಹ, ಮುಂದಿನ ಸೂಚನೆ ಬರುವವರೆಗೆ ಕರ್ಫ್ಯೂವಿನ ಕಾರಣದಿಂದ ನನ್ನ ಮನೆಯಲ್ಲೇ ಇರುವವನಾಗಿದ್ದೇನೆ. ಹೇಗೂ, ಈ ಸಂಕಷ್ಟದ ಸಮಯಗಳಲ್ಲಿ ವಿಶೇಷವಾಗಿ, ನಾವು ದೇವರಲ್ಲಿ ಭರವಸವಿಡೋಣ. ನಾವು ದೇವರಲ್ಲಿ ನಮ್ಮ ಭರವಸೆ ಇಡೋಣ – ತನ್ನನ್ನು ಪ್ರೀತಿಸುವವರ ರಕ್ಷಣೆಗಾಗಿ ಅತ್ಯಗತ್ಯವಾಗಿರುವುದನ್ನು ಹೇಗೆ ಕೊಡಬೇಕೆಂಬುದನ್ನು ಆತನು ಯಾವಾಗಲೂ ತಿಳಿದವನಾಗಿದ್ದಾನೆ!

**ಮುಖ್ಯ ಅಪೊಸ್ತಲರಾದ ಶ್ನೈಡರ್‌ರವೇ, ಈ ಸಮಾಗಮಕ್ಕಾಗಿ ನಿಮಗೆ ಬಹಳಷ್ಟು ಧನ್ಯವಾದಗಳು.**